ಅನುಬಂಧ–1

ಹದಿಮೂರನೇ ವಿಧಾನಸಭೆಗೆ ಸಂಬಂಧಪಟ್ಟಂತೆ ರಾಷ್ಟ್ರಪತಿ/ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆದಿರತಕ್ಕ ವಿಧೇಯಕಗಳ ಪಟ್ಟಿ

ಕ್ರ ಸಂ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಸಂಖ್ಯೆ ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
1	ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ವಿಧೇಯಕ, 2011 (ವಿ.ಪ. ಸಂಖ್ಯೆ 8)	21.02.2012	ರಾಜ್ಯಪಾಲರು
2	ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2012 (ಸಂಖ್ಯೆ 4)	31.03.2012	ರಾಜ್ಯಪಾಲರು
3	ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2012 (ಸಂಖ್ಯೆ 8)	31.03.2012	ರಾಜ್ಯಪಾಲರು
4	ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ, 2012 (ಸಂಖ್ಯೆ 10)	31.03.2012	ರಾಜ್ಯಪಾಲರು
5	ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕ, 2012 (ಸಂಖ್ಯೆ 6)	31.03.2012	ರಾಜ್ಯಪಾಲರು
6	ಕರ್ನಾಟಕ ಧನವಿನಿಯೋಗ ವಿಧೇಯಕ, 2012(ಸಂಖ್ಯೆ 5)	29.03.2012	ರಾಜ್ಯಪಾಲರು
7	ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2012 (ಸಂಖ್ಯೆ 3)	31.03.2012	ರಾಜ್ಯಪಾಲರು
8	ಕರ್ನಾಟಕ ವಿಧಾನಮಂಡಲದವರ ವೇತನ, ನಿವೃತ್ತಿ ವೇತನ ಮತ್ತು ಭತ್ಯೆಗಳು (ತಿದ್ದುಪಡಿ) ವಿಧೇಯಕ, 2012 (ಸಂಖ್ಯೆ 9)	26.04.2012	ರಾಜ್ಯಪಾಲರು
9	ಸಹ್ಯಾದ್ರಿ ಪರಂಪರೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2011 (ಸಂಖ್ಯೆ 35)	26.04.2012	ರಾಜ್ಯಪಾಲರು
10	ಕರ್ನಾಟಕ ಪೌರಸಭೆಗಳು ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ, 2011 (ಸಂಖ್ಯೆ 46)	26.04.2012	ರಾಜ್ಯಪಾಲರು
11	ಕರ್ನಾಟಕ ಪೌರನಿಗಮಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2012 (ಸಂಖ್ಯೆ 15)	26.04.2012	ರಾಜ್ಯಪಾಲರು

3. ಮಾನ್ಯ ಮುಖ್ಯಮಂತ್ರಿಯವರಿಂದ ನೂತನ ಮಂತ್ರಿಮಂಡಲದ ಸದಸ್ಯರ ಪರಿಚಯ

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಸಚಿವ ಸಂಪುಟದ ಎಲ್ಲಾ ಮಾನ್ಯ ಸಚಿವರ ಪರಿಚಯವನ್ನು ಮಾಡಿಕೊಡುವುದಕ್ಕೆ ತಮ್ಮ ಒಪ್ಪಿಗೆಯನ್ನು ಕೋರುತ್ತೇನೆ. ಮಾನ್ಯ ಈಶ್ವರಪ್ಪನವರು, ಉಪ ಮುಖ್ಯಮಂತ್ರಿಗಳು.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗುತ್ತಾರೆಂದು ನಾನು ಬಹಳ ಸಾರಿ ನನ್ನ ಕ್ಷೇತ್ರಕ್ಕೆ ಬಂದಾಗ ಹೇಳುತ್ತಿದ್ದೆ ಈಗ ಅವರು ಮುಖ್ಯಮಂತ್ರಿಗಳಾಗಿದ್ದಾರೆ. ಈಗಲಾದರೂ ಕೂಡ ನೀವು ನಮ್ಮನ್ನು ನಂಬಿ. ಆದರೆ ಒಂದು ಪ್ರಶ್ನೆ ತಮ್ಮ ಅನುಕೂಲಕ್ಕೋಸ್ಕರವೇ ತಮ್ಮ ಕುರ್ಚಿಯು ಭದ್ರವಾಗಿರಬೇಕು ಎನ್ನುವ ಕಾರಣಕ್ಕೋಸ್ಕರವೇ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಮಾನ್ಯ ಸಭಾಧ್ಯಕ್ಷರೆ, ತಾವು ಅವಕಾಶವನ್ನು ಮಾಡಿಕೊಡಬೇಕು. ತಾವು ಹೇಳುವುದನ್ನು ನಾನು ಒಪ್ಪುತ್ತೇನೆ. ಅದಕ್ಕಿಂತ ಮುಂಚೆ ನಾನು ಕ್ರಿಯಾಲೋಪವನ್ನು ಎತ್ತುತ್ತಿದ್ದೇನೆ. ಅದು ಏನೆಂದರೆ, ಅವರ ಆಂತರಿಕವಾಗಿರತಕ್ಕಂಥ ವಿಚಾರ. ಮಾನ್ಯ ಯಡಿಯೂರಪ್ಪನವರು, ಮಾನ್ಯ ಸದಾನಂದಗೌಡರು ಮುಖ್ಯ ಮಂತ್ರಿಯಾಗಿ ಹೋದರು, ಈಗ ಮಾನ್ಯ ಜಗದೀಶ್ ಶೆಟ್ಟರವರನ್ನು ಮುಖ್ಯ ಮಂತ್ರಿಗಳನ್ನಾಗಿ ಮಾಡಿದ್ದಾರೆ. ಅವರು ಮುಖ್ಯಮಂತ್ರಿಗಳಾದ ಮೇಲೆ ಇದು ಮೊದಲನೇ ಅಧಿವೇಶನ. ಅದಕ್ಕೆ ಮಂತ್ರಿ ಮಂಡಲದ ಸಚಿವರನ್ನು ಪರಿಚಯ ಮಾಡಿಕೊಳ್ಳಬೇಕಾದದ್ದು ಸಂಪ್ರದಾಯ, ಮಾಡುತ್ತಿದ್ದಾರೆ. ಅದಕ್ಕಿಂತ ಮುಖ್ಯವಾಗಿರತಕ್ಕಂಥ ಇನ್ನೊಂದು ಮುಖ್ಯವಾದ ಸಂಗತಿ ಎಂದರೆ, ಅವರು ಪ್ರಮಾಣವಚನ ಸ್ವೀಕಾರ ಮಾಡಿ ಕೆಲವೇ ದಿವಸಗಳು ಆಗಿರಬೇಕಾದಾಗ ಮಾಧ್ಯಮದಲ್ಲಿ ಬರುತ್ತಿರತಕ್ಕಂಥದ್ದು ಏನೆಂದರೆ, ಇವರಿಗೆ ಬಹುಮತ ಇಲ್ಲವೆನ್ನುವ ಸಂಗತಿ ಬರುತ್ತಿದೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾನಾಯಕರು ಪರಿಚಯವನ್ನು

ಮಾಡಿಸುತ್ತಿದ್ದಾರೆ. ಅವರು ಪರಿಚಯ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು. ನಿಯಮಾವಳಿಗಳ ಪ್ರಕಾರ ಸಭಾಧ್ಯಕ್ಷರನ್ನು ವಿನಂತಿ ಮಾಡಿಕೊಳ್ಳಲಿ ಆಮೇಲೆ ಉಳಿದ ವಿಷಯದ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಟಿ. ಬಿ. ಜಯಚಂದ್ರ: ಇದು ಮಾಧ್ಯಮದಲ್ಲಿ ಬರುತ್ತಿರುವುದು.

ಶ್ರೀ ವಿಶ್ವೇಶ್ವರಹೆಗಡೆ ಕಾಗೇರಿ: ಇದನ್ನು ರಾಜಕೀಯ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿರುವುದು ಸರಿಯಲ್ಲ. ಇದಕ್ಕೆ ತಾವು ಅವಕಾಶವನ್ನು ಕೊಡಬಾರದು.

ಶ್ರೀ ಟಿ. ಬಿ.ಜಯಚಂದ್ರ: ಒಂದೇ ನಿಮಿಷದಲ್ಲಿ ಇದನ್ನು ಮಾಡಬಹುದು.

ಒಬ್ಬ ಮಾನ್ಯ ಸದಸ್ಯರು: ಚರ್ಚೆ ಮಾಡುವಾಗ ಕ್ರಿಯಾ ಲೋಪ ಎಲ್ಲಿ ಬರುತ್ತದೆ?

ಅಧ್ಯಕ್ಷರು: ಅದು ಬೇರೆ ಇಷ್ಯೂ ಆಗಿದೆ. ಇದನ್ನು ತಾವು ಬೇರೆ ರೂಪದಲ್ಲಿ ತರಬೆಕು.

ಶ್ರೀ ಟಿ. ಬಿ. ಜಯಚಂದ್ರ: ಇದನ್ನು ಲೆಕ್ಕಹಾಕಿಕೊಂಡಾಗ 120....

ಅಧ್ಯಕ್ಷರು: ಕ್ರಿಯಾಲೋಪ sustainable ಅಲ್ಲ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಸಂಖ್ಯಾಬಲವನ್ನು ಲೆಕ್ಕಹಾಕಿಕೊಂಡಾಗ..

ಅಧ್ಯಕ್ಷರು: ತಾವು ಇದನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ.

ಶ್ರೀ ಟಿ. ಬಿ. ಜಯಚಂದ್ರ: ಅದನ್ನು ಮೀರುವುದು ಬೇಡ. ಇನ್ನು 9 ತಿಂಗಳು ಅಧಿಕಾರ ಇರುವಾಗ, ಅವರಿಗೆ ಬಹುಮತವಿದೆಯೆಂಬ ಮಾತನ್ನು ಹೇಳುತ್ತಿದ್ದಾರೆ.

ಅಧ್ಯಕ್ಷರು: ಇದನ್ನು ಕ್ರಿಯಾಲೋಪದಲ್ಲಿ ಹೇಗೆ ಎತ್ತುವುದಕ್ಕಾಗುತ್ತದೆ?

ಶ್ರೀ ಟಿ. ಬಿ. ಜಯಚಂದ್ರ: ಅವರು ಪರಿಚಯವನ್ನು ಮಾಡಿಕೊಳ್ಳು-ವುದನ್ನು ಮೊದಲು ಮಾಡಲಿ. ಮಾನ್ಯ ಅಧ್ಯಕ್ಷರೆ, point of order...

ಅಧ್ಯಕ್ಷರು:ಇದು point of orderನಲ್ಲಿ ಬರುವುದಿಲ್ಲ.

(ಗೊಂದಲ)

MR. SPEAKER:- It is not under point of order. It will not come under point of order. ಇದು point of orderನಲ್ಲಿ ಬರುವುದಿಲ್ಲ. ಅದು ಬೇರೆ ಇಷ್ಯೂ ಆಗಿದೆ.

ಶ್ರೀ ಟಿ. ಬಿ. ಜಯಚಂದ್ರ: ನಾನು ಏತಕ್ಕಾಗಿ point of order ಹೇಳುತ್ತಿದ್ದೇನೆಂದರೆ, ಇದು ಈ ಸಭೆಯಲ್ಲೆ, constitutionally constituted with majority.

ಅಧ್ಯಕ್ಷರು: Governor ನವರು ಮೆಜಾರಿಟಿಯನ್ನು ಕೇಳಲಿಲ್ಲ. ನಿಮಗೆ ಏತಕ್ಕಾಗಿ ಬೇಕು?

(ಗೊಂದಲ)

ಅಧ್ಯಕ್ಷರು: ಗೌರ್ನರ್‌ರವರು ಬಹುಮತವಿದೆಯಾ ಎಂದು ಕೇಳಲಿಲ್ಲ. That is a different issue.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಇವತ್ತು ಬಹುಮತ ಇದೆ ಎನ್ನುವುದು ಹೇಗೆ?

MR.SPEAKER:- You have every right to move a motion.

ಶ್ರೀ ಟಿ. ಬಿ. ಜಯಚಂದ್ರ: ಇವತ್ತು Confidence motion move ಮಾಡಿರುವ ಬಗ್ಗೆ ನೀವೇ ಹೇಳಿ.

ಅಧ್ಯಕ್ಷರು: ಇದು ಸರಿ ಅನ್ನಿಸುತ್ತಿಲ್ಲ.

ಶ್ರೀ ಟಿ. ಬಿ. ಜಯಚಂದ್ರ: ಹಾಗಾದರೆ ಪತ್ರಿಕೆಯಲ್ಲಿ ಬರೆದಿರುವುದು ಸುಳ್ಳಾ?

ಅಧ್ಯಕ್ಷರು: ಪತ್ರಿಕೆಯಲ್ಲಿ ಬಂದಿರುವುದು ಕ್ರಿಯಾಲೋಪದಲ್ಲಿ ಬರುವುದಿಲ್ಲ. ಈಗ ಪರಿಚಯವನ್ನು ಮಾಡುವುದಾದರೂ ಹೇಗೆ? ಅವರು ಮೊದಲು ಪರಿಚಯವನ್ನು ಮಾಡಿಕೊಡಲಿ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಅತೃಪ್ತರು 25 ಜನ ಇದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ನಾನು ಸಚಿವ ಸಂಪುಟದ ಸದಸ್ಯರ ಪರಿಚಯವನ್ನು ಮಾಡುತ್ತೇನೆ. ಆಮೇಲೆ ಅವರು ಏನು ರೈಸ್ ಮಾಡುತ್ತಾರೆ ಮಾಡಲಿ. ಅವರಿಗೆ ಅಧಿಕಾರ ಇದೆ. ಪ್ರತಿಪಕ್ಷದ ನಾಯಕರು, ಉಪನಾಯಕರು ಅವರು ಯಾವ ವಿಷಯದ ಮೇಲೆ ರೈಸ್ ಮಾಡಬೇಕು ಮಾಡಲಿ.

ಅಧ್ಯಕ್ಷರು: ನೀವು ಆಮೇಲೆ ಪ್ರಸ್ತಾಪ ಮಾಡಿ.

ಶ್ರೀ ಜಗದೀಶ್ ಶೆಟ್ಟರ್: ಆಮೇಲೆ ಬೇಕಾದರೆ ಅವರು ವಿಶ್ವಾಸ ಮತ್ತು ಅವಿಶ್ವಾಸ ಎಂದು ಅವರು ನಂತರ ಪ್ರಸ್ತಾಪ ಮಾಡಲಿ. ನಾವು ಎಲ್ಲವನ್ನು ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ.

ಅಧ್ಯಕ್ಷರು: ತಾವು ಎತ್ತಿರುವ ಕ್ರಿಯಾಲೋಪ ಇದಕ್ಕೆ ಬರುವುದಿಲ್ಲ. ನೀವು ಬೇಕಾದರೆ ಬೇರೆ ರೂಪದಲ್ಲಿ ತನ್ನಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಕೆ.ಎಸ್.ಈಶ್ವರಪ್ಪ ಶ್ರೀ ಆರ್.ಅಶೋಕ, ಸಚಿವರುಗಳಾದಂತಹ ಶ್ರೀ ಗೋವಿಂದ ಕಾರಜೋಳ, ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಶ್ರೀ ಉಮೇಶ್ ಕತ್ತಿ, ಶ್ರೀ ಬಸವರಾಜ ಬೊಮ್ಮಾಯಿ, ಕು.ಶೋಭಾ ಕರಂದ್ಲಾಜೆ, ಶ್ರೀ ಸಿ.ಪಿ.ಯೋಗೀಶ್ವರ್, ಶ್ರೀ ರೇವುನಾಯಕ್ ಬೆಳಮಗಿ, ಶ್ರೀ ರಾಜುಗೌಡ, ಶ್ರೀ ಅರವಿಂದ ಲಿಂಬಾವಳಿ, ಶ್ರೀ ಕಳಸಪ್ಪ ಬಂಡಿ, ಶ್ರೀ ಕೋಟಾ ಶ್ರೀನಿವಾಸ್ ಪೂಜಾರಿ, ಶ್ರೀ ಅಪ್ಪಚ್ಚು ರಂಜನ್‌ರವರು. ಇನ್ನುಳಿದ ಕೆಲವು ಸಚಿವರು ವಿಧಾನ ಪರಿಷತ್ತಿನಲ್ಲಿರುತ್ತಾರೆ.

ಅಧ್ಯಕ್ಷರು: ಆಯಿತು. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ.

4. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ.

ವಿಷಯ:– ರಾಜ್ಯದಲ್ಲಿ ಬರ ಪರಿಸ್ಥಿತಿ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಾನು ನಿಯಮ 60ರ ಅಡಿಯಲ್ಲಿ ಒಂದು ಸೂಚನೆಯನ್ನು ಕೊಟ್ಟಿದ್ದೇನೆ. ಅದು ಬಹಳ ಪ್ರಾಮುಖ್ಯವಾದಂಥ ಮತ್ತು ತುರ್ತಾಗಿ ಚರ್ಚೆ ಮಾಡಬೇಕಾದಂಥ ವಿಷಯಕ್ಕೆ ಸಂಬಂಧಪಟ್ಟದ್ದಾಗಿದೆ. ಕಳೆದ ವರ್ಷ 2011 ರಲ್ಲಿ ಮಳೆಯಾಗಲಿಲ್ಲ. ನಮಗೆ ಮುಂಗಾರು ಮತ್ತು ಹಿಂಗಾರು ಎರಡು ಕೂಡ ಮಳೆ ವಿಫಲವಾಯಿತು. ಈ ರಾಜ್ಯದ ರೈತರು ಮತ್ತು ಕೂಲಿಕಾರ್ಮಿಕರು ಬಹಳ ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿರುತ್ತಾರೆ. ಮತ್ತೆ ಈ ಬಾರಿ ಮುಂಗಾರು ಕೂಡ ಇಲ್ಲಿಯವರೆಗೆ ಮಳೆ ಬಿದ್ದಿಲ್ಲ. ಕೆಲವು ಕಡೆ ಅಲ್ಲಿ ಇಲ್ಲಿ scattering ರೀತಿ ಮಳೆ ಆಗಿದೆ. As a matter of fact, ಮಲೆನಾಡಿನಲ್ಲಿಯೂ ಕೂಡ ವಾಡಿಕೆಯಷ್ಟು ಮಳೆ ಆಗಿಲ್ಲ. Coastal area ದಲ್ಲಿಯೂ ಕೂಡ ವಾಡಿಕೆಯಷ್ಟು ಮಳೆ ಬಿದ್ದಿಲ್ಲ. 50% ಮಳೆ ಆಗಿದೆ. ದಕ್ಷಿಣ ಒಳನಾಡು ಮತ್ತು ಉತ್ತರ ಒಳನಾಡಿನಲ್ಲಿಯೂ ಕೂಡ ಮಳೆ ಬಿದ್ದಿಲ್ಲ. ಏಪ್ರಿಲ್‌ನಲ್ಲಿ ಸ್ವಲ್ಪ pre-monsoon ಮಳೆ ಬಿಟ್ಟರೆ ಈ ಕಡೆ ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ತುಮಕೂರು, ಚಿತ್ರದುರ್ಗ ಕೆಲವು ಕಡೆ